# ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ

## ಗ್ರಾಮೀಣ ಕೃಷಿ ಹವಾಮಾನ ಸೇವಾ ಯೋಜನೆ

## ದಕ್ಷಿಣ ಕನ್ನಡ ಜಿಲ್ಲೆಯ ಕೃಷಿ ಹವಾಮಾನ ಸಲಹಾ ಸೂಚಕ

(ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು ಹಾಗೂ ಗ್ರಾಮೀಣ ಕೃಷಿ ಹವಾಮಾನ ಸೇವಾ ಯೋಜನೆ, ಬ್ರಹ್ಮಾವರ-576213, ಉಡುಪಿ ಜಿಲ್ಲೆ ಕರ್ನಾಟಕ ಇವರ ಜಂಟಿ ಪ್ರಸಾರ)

**ಹವಾಮಾನ ಮುನ್ಸೂಚನೆಯ ಅವಧಿ 18-12-2021 ರಿಂದ 22-12-2021**

ಸಂ. ಗ್ರಾ.ಕೃ.ಹ.ಸೇ.ಬ/101/2021 ದಿನಾಂಕ: **17.12.2021**

ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು, ಇವರು ದಕ್ಷಿಣ ಕನ್ನಡ ಜಿಲ್ಲೆಗೆ ಮುಂದಿನ ಐದು ದಿನಗಳು ದಿನಾಂಕ **18-12-2021 ರಿಂದ 22-12-2021** ರ ವರೆಗೆ ಲಭ್ಯವಿರುವ ಹವಾಮಾನ ಮುನ್ಸೂಚನೆ ಈ ಕೆಳಕಂಡಂತೆ ನೀಡಿರುತ್ತಾರೆ

| ಹವಾಮಾನದ ಅಂಶಗಳು | ಕ್ರೋಢೀಕರಿಸಿದ ಹವಾಮಾನ ಮುನ್ಸೂಚನೆ | | | | | ಹಿಂದಿನ ವಾರದ ಹವಾಮಾನ ಪರಿಸ್ಥಿತಿಯ ಒಟ್ಟು/ಸರಾಸರಿ | ಮುಂದಿನ ಐದು ದಿನಗಳ ಹವಾಮಾನ ಮುನ್ಸೂಚನೆಯ ಒಟ್ಟು/ಸರಾಸರಿ |
|---|---|---|---|---|---|---|---|
| | ದಿನ-1 (18.12.2021) | ದಿನ-2 (19.12.2021) | ದಿನ-3 (20.12.2021) | ದಿನ-4 (21.12.2021) | ದಿನ-5 22.12.2021) | | |
| ಮಳೆ ಪ್ರಮಾಣ (ಮಿ.ಮೀ.) | 0 | 0 | 0 | 0 | 0 | 0 | 0 |
| ಗರಿಷ್ಠ ಉಷ್ಣಾಂಶ (°C) | 32 | 32 | 32 | 32 | 32 | 34.9 | 32↓ |
| ಕನಿಷ್ಠ ಉಷ್ಣಾಂಶ (°C) | 22 | 22 | 22 | 21 | 21 | 23.6 | 21.6↓ |
| ಮೋಡದ ಹೊದಿಕೆ (ಒಕ್ತಾ) | 2 | 2 | 2 | 2 | 2 | 3 | 2↓ |
| ಗರಿಷ್ಠ ಆರ್ದ್ರತೆ (ಶೇ.) | 66 | 65 | 65 | 65 | 65 | 77.2 | 65.2↓ |
| ಕನಿಷ್ಠ ಆರ್ದ್ರತೆ (ಶೇ.) | 63 | 63 | 64 | 62 | 62 | 58.4 | 62.8↑ |
| ಗಾಳಿಯ ವೇಗ (Kmph) | 2 | 3 | 2 | 2 | 2 | 5.4 | 2.2↓ |
| ಗಾಳಿಯ ದಿಕ್ಕು (°) | 71 | 75 | 71 | 75 | 71 | 284 | 73↓ |
| ಮುನ್ಸೂಚನೆ | DRY | DRY | DRY | DRY | DRY | | |
| ಸಂಭವನೀಯತೆ (%) | 0 | 0 | 0 | 0 | 0 | | |

**ಭಾರತ ಹವಾಮಾನ ಇಲಾಖೆ, ನವದೆಹಲಿ ಮತ್ತು ರಾಜ್ಯ ಹವಾಮಾನ ಇಲಾಖೆ, ಬೆಂಗಳೂರು ಇವರು ನೀಡಿರುವ ವಿಸ್ತೃತ ಮಳೆ ಮುನ್ಸೂಚನೆಯ ಪ್ರಕಾರ ಕರ್ನಾಟಕದ ಕರಾವಳಿ ತೀರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗೆ ದಿನಾಂಕ 22.12.2021 ರಿಂದ 28.12.2021 ರವರೆಗೆ ವಾಡಿಕೆಗಿಂತ ಕಡಿಮೆ ಮಳೆಯಾಗುವ ಸಂಭವವಿದೆ.**

## ಹವಾಮಾನ ಪರಿಸ್ಥಿತಿ ಮತ್ತು ಮುನ್ಸೂಚನೆ ಸಾರಾಂಶ

ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು ಇವರು, ದಕ್ಷಿಣ ಕನ್ನಡ ಜಿಲ್ಲೆಗೆ ನೀಡಿದ ಮುನ್ಸೂಚನೆಯ ಪ್ರಕಾರ, **ಮುಂದಿನ ಐದು ದಿನಗಳ ಕಾಲ ಒಣಹವೆ ಮುಂದುವರೆಯುವ ಸಾಧ್ಯತೆ ಇದ್ದು, ಯಾವುದೇ ಮಳೆಯಾಗುವ ಮುನ್ಸೂಚನೆ ಇಲ್ಲ.** ಮುಂದಿನ ಐದು ದಿನಗಳಲ್ಲಿ ಗರಿಷ್ಠ ತಾಪಮಾನವು **32°C** ಇರುತ್ತದೆ ಮತ್ತು ಕನಿಷ್ಠ ತಾಪಮಾನವು **21-22°C** ಇರುತ್ತದೆ. ಸರಾಸರಿ ಸಾಪೇಕ್ಷ ಆದ್ರತೆಯು ಬೆಳಗಿನ ಸಮಯದಲ್ಲಿ **65%** ರಿಂದ **66%** ರಷು ಇರುತ್ತದೆ. ಹಾಗೂ ಮಧ್ಯಾಹ್ನದ ಸಮಯದಲ್ಲಿ **62%** ರಿಂದ **64%** ರಷ್ಟು ಇರುತ್ತದೆ. ಸರಾಸರಿ ಗಾಳಿಯ ವೇಗವು **2-3** ಕೀ.ಮೀ. ಪ್ರತಿ ಘ,ವೇಗದಲ್ಲಿ ಬೀಸಲಿದೆ. ಈ ಹವಾಮಾನ ಪರಿಸ್ಥಿತಿಯನ್ನು ಪರಿಗಣಿಸಿದರೆ, ರೈತರು ಈ ಕೆಳಕಂಡ ಕೃಷಿ ಸಲಹೆಗಳನ್ನು ಅನುಸರಿಸುವಂತೆ ಸಲಹೆ ನೀಡಲಾಗಿದೆ.


**Mobile Applications developed by India Meteorological Department for the benefit of Farming Community Farmers are suggested to download the app using below links**

| | Mausam: | Meghdoot: | Damini: |
|---|---|---|---|
| Andriod: | https://play.google.com/store/apps/details?id=com.imd.masuam | https://play.google.com/store/apps/details?id=com.aas.meghdoot | https://play.google.com/store/apps/details?id=com.lightening.live.damini |
| Apple OS: | https://apps.apple.com/us/app/id1522893967 | https://apps.apple.com/in/app/meghdoot/id1474048155 | https://apps.apple.com/app/id1502385645 |

**Decadal Rainfall (mm) Comparison:**

| Year | 30 years Mean | 2010 | 2011 | 2012 | 2013 | 2014 | 2015 | 2016 | 2017 | 2018 | 2019 | 2020 | 2021 Cum.Rainfall |
|---|---|---|---|---|---|---|---|---|---|---|---|---|---|
| Rainfall | | 4832 | 3628.1 | 2984.2 | 3325.3 | 2816.3 | 2383.4 | 2827.1 | 3000 | 3381.2 | 4118.4 | 4110.8 | 4110.8 |
| Rainy days | | 126 | 128 | 105 | 127 | 112 | 107 | 119 | 121 | 112 | 123 | 126 | 152 |


Realised Rainfall (09th Dec to 15th Dec, 2021)




Rainfall Forecast Map (17th Dec to 23rd dec 2021)




Standardized Precipitation Index Outlook (18.11.2021 to 15.12.2021)



Normalized Difference Vegetation Index



## ದಕ್ಷಿಣ ಕನ್ನಡ ಜಿಲ್ಲೆಗೆ ನೀಡಿದ ಹವಾಮಾನ ಮುನ್ಸೂಚನೆ ಆಧಾರಿಸಿ ನೀಡಿದ ಕೃಷಿ ಸಲಹೆಗಳು

### ತೋಟಗಾರಿಕೆ ಬೆಳೆಗಳು:

| ಬೆಳೆ | ಕೃಷಿ ಸಲಹೆಗಳು |
|---|---|
| ಅಡಿಕೆ<br>(ಕಳೆ ನಿಯಂತ್ರಣ) | ➢ ತೋಟಗಳಲ್ಲಿ ಕಳೆ ನಿಯಂತ್ರಿಸಲು ಗ್ಲೈಫೋಸೆಟ್ 41% ಎಸ್.ಎಲ್ @ 6ಮಿಲೀ/ಲೀ ಅಥವಾ ಗ್ಲೈಫೋಸೆಟ್ 54% ಎಸ್.ಸಿ @ 4 ಮಿಲೀ/ಲಿ ಅಥವಾ ಗ್ಲೈಫೋಸೆಟ್ 71% ಎಸ್.ಜಿ. 6 ಗ್ರಾಂ. ಪ್ರತಿ ಲೀಟರ್ ನೀರಿಗೆ ಬೆರೆಸಿ ಕಳೆಗಳ ಮೇಲೆ ಸಿಂಪಡಿಸಿ. ಅಡಿಕೆ ಮರಕ್ಕೆ ಸಿಂಪರಣೆ ತಗುಲದಂತೆ ಎಚ್ಚರ ವಹಿಸಿ.<br>➢ ಒಣಗಿದ ಹಿಂಗಾರ ಮತ್ತು ರೋಗ/ಕೀಟ ಭಾದೆಗೆ ತುತ್ತಾದ ಅಡಿಕೆ ಕಾಯಿಗಳನ್ನು ಸಂಗ್ರಹಿಸಿ ನಾಶ ಮಾಡುವುದು. |
| ತೆಂಗು<br>(ಕಳೆ ನಿರ್ವಹಣೆ) | ➢ ತೋಟಗಳಲ್ಲಿ ಕಳೆ ನಿಯಂತ್ರಿಸಲು ಗ್ಲೈಫೋಸೆಟ್ 41% ಎಸ್.ಎಲ್ @ 6ಮಿಲೀ/ಲೀ ಅಥವಾ ಗ್ಲೈಫೋಸೆಟ್ 54% ಎಸ್.ಸಿ @ 4 ಮಿಲೀ/ಲಿ ಅಥವಾ ಗ್ಲೈಫೋಸೆಟ್ 71% ಎಸ್.ಜಿ. 6 ಗ್ರಾಂ. ಪ್ರತಿ ಲೀಟರ್ ನೀರಿಗೆ ಬೆರೆಸಿ ಕಳೆಗಳ ಮೇಲೆ ಸಿಂಪಡಿಸಿ. ತೆಂಗಿನ ಮರಕ್ಕೆ ಸಿಂಪರಣೆ ತಗುಲದಂತೆ ಎಚ್ಚರ ವಹಿಸಿ. |
| ಬಾಳೆ<br>(ಸಾಮಾನ್ಯ ಸಲಹೆ) | ➢ 5 ತಿಂಗಳ ನಂತರ ಪ್ರತಿ ಲೀಟರ್ ನೀರಿಗೆ 5ಗ್ರಾಂ. ಬನಾನ ಸ್ಪೆಷಲ್(ಲಘು ಪೋಷಕಾಂಶ) ಮಿಶ್ರಿಸಿ ಸಿಂಪಡಿಸುವುದು. (15ಲೀ. ಸ್ಪ್ರೇಯರ್‌ಗೆ ಒಂದು ನಿಂಬೆ ಹಣ್ಣು ಹಾಗೂ ಒಂದು ಶಾಂಪೂವನ್ನು ಬೆರೆಸಬೇಕು)<br>➢ ಬಾಳೆ ಬೆಳೆಯಲ್ಲಿ ಉತ್ತಮ ಗುಣಮಟ್ಟ ಹಾಗೂ ಅಧಿಕ ಇಳುವರಿ ಪಡೆಯಲು ಪ್ರತಿ ಬಾಳೆಗೊನೆಗೆ 10ಗ್ರಾಂ. ಯುರಿಯಾ+10ಗ್ರಾಂ. ಪೊಟ್ಯಾಷಿಯಂ ಸಲ್ಫೇಟ್+0.5ಕಿ.ಗ್ರಾ. ಹಸಿ ಸಗಣಿಯನ್ನು 100ಮಿ.ಲೀ ನೀರಿಗೆ ಬೆರೆಸಿ ಗೊನೆಯ ತುದಿಗೆ ಕಟ್ಟುವುದು. |
| ಕಾಳುಮೆಣಸು<br>(ನಿಧಾನ ಸೊರಗು ರೋಗ) | ಮುಂಜಾಗ್ರತ ಕ್ರಮವಾಗಿ ರೋಗ ಬಂದಿರುವ ಬಳ್ಳಿಗಳ ಎಲೆಗಳನ್ನು ಕಿತ್ತು ನಾಶಪಡಿಸಬೇಕು ಅನಂತರ ಬೇವಿನ ಹಿಂಡಿ ಮಿಶ್ರಿತ ಅಥವಾ ಸಹ್ಯಾದ್ರಿ ತ್ರಿಶೂಲ್ ಮಿಶ್ರಿತ ಕೊಟ್ಟಿಗೆ ಗೊಬ್ಬರವನ್ನು ಬಳ್ಳಿಗಳಿಗೆ ನೀಡಬೇಕು ಅಥವಾ 2ಗ್ರಾಂ ಮೆಟಾಲಾಕ್ಸಿಲ್+ ಮ್ಯಾಂಕೋಜೆಬ್ ಅನ್ನು ಪ್ರತಿ ಲೀಟರ್ ನೀರಿಗೆ ಬೆರಸಿ ನೀರಿಗೆ ಬೆರಸಿ ಬುಡದ ಸುತ್ತ ಹಾಕಬೇಕು ಅಥವಾ ಸಿಂಪಡಿಸುವುದು. |
| ಕಾಳುಮೆಣಸು<br>(ಸಾಮಾನ್ಯ ಸಲಹೆ) | ಉತ್ತಮ ಇಳುವರಿಯನ್ನು ಪಡೆಯಲು ಪೆಪ್ಪರ್ ಸ್ಪೆಷಲ್ ಅನ್ನು 5ಗ್ರಾಂ, ನಂತೆ ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸುವುದು. |
| ಪಪ್ಪಾಯ<br>(ನಾಟಿ) | 45-60 ದಿನಗಳ ಪಪ್ಪಾಯ ಸಸಿಗಳನ್ನು ನಾಟಿ ಮಾಡಲು ಸೂಕ್ತ ಸಮಯವಾಗಿದೆ. |
| ಮಲ್ಲಿಗೆ<br>(ಗಿಡ ಸವರುವಿಕೆ) | ಮಲ್ಲಿಗೆ ಗಿಡವನ್ನು ಸವರಲು ಸೂಕ್ತ ಸಮಯವಾಗಿದೆ. ರೋಗ ಭಾಧಿತ ಮತ್ತು ಒಣಗಿದ ಗೆಲ್ಲನ್ನು ಕತ್ತರಿಸಬೇಕು ನಂತರ ಕತ್ತರಿಸಿದ ಭಾಗಕ್ಕೆ 10% ಬೋರ್ಡೋ ಪೇಸ್ಟನ್ನು ಹಚ್ಚಬೇಕು. |

### ಕ್ಷೇತ್ರ ಬೆಳೆಗಳು:

| | |
|---|---|
| ಭತ್ತ<br>(ಕಳೆ ನಿರ್ವಹಣೆ) | ➢ ನಾಟಿ ಮಾಡಿದ ಮೊದಲ 8-10 ದಿನಗಳ ನಂತರ ಉದಯೋತ್ತರ ಕಳೆನಾಶಕವಾದ ಬಿಸ್ಪೈರಿಬ್ಯಾಕ್ ಸೋಡಿಯಂ 10% ಎಸ್.ಸಿ ಅನ್ನು 0.1 ಎಮ್.ಎಲ್ ಪ್ರತಿ ಲೀಟರ್ ನೀರಿಗೆ ಬೆರಸಿ ಸಿಂಪಡಿಸುವುದು. (ಸೂಚನೆ: ಕಳೆಗಳು 2-4 ಎಲೆಗಳ ಹಂತದಲ್ಲಿರಬೇಕು ಹಾಗೂ ಒಂದು ಎಕರೆಗೆ 120 – 150ಲೀಟರ್ ನೀರನ್ನು ಬಳಸಬೇಕು.) |
| ಭತ್ತ<br>(ಬೇಸಾಯ ಸಲಹೆ) | ಭತ್ತ ಕಟಾವಾದ ನಂತರ ಎರಡನೆ ಬೆಳೆಯಾಗಿ ಉಳಿಕೆ ತೇವಾಂಶದಲ್ಲಿ ದ್ವಿದಳ ಧಾನ್ಯಗಳಾದ ಉದ್ದು, ಹೆಸರು ಅಥವಾ ಅವಡೆ ಬೆಳೆಗಳನ್ನು ಮತ್ತು ಹಸಿರೆಲೆ ಗೊಬ್ಬರದ ಬೀಜಗಳನ್ನು ಬಿತ್ತನೆ ಮಾಡಲು ಸೂಕ್ತ ಸಮಯವಾಗಿದೆ. |
| ಶೇಂಗಾ<br>(ಭೂಮಿ ಸಿದ್ಧತೆ) | ➢ ಭತ್ತ ಕಟಾವು ಮಾಡಿದ ನಂತರ ಹಿಂಗಾರಿನಲ್ಲಿ ಎರಡನೆ ಬೆಳೆಯಾಗಿ ಶೇಂಗಾ ಬೆಳೆಯುವ ರೈತರು ಭೂಮಿಯನ್ನು ಪ್ರಾಥಮಿಕ ಉಳುಮೆ ಮಾಡಲು ಸೂಕ್ತ ಸಮಯ<br>➢ ಪ್ರಾಥಮಿಕ ಉಳುಮೆ ಮಾಡಿದ ರೈತರು ದ್ವಿತಿಯ ಉಳುಮೆ ಉಪಕರಣದ ರೋಟೋವೆಟರ್‌ನಿಂದ ಭೂಮಿಯನ್ನು ಹದಮಾಡಿ ತೇವಾಂಶವನ್ನಾಧರಿಸಿ ಬಿತ್ತನೆ ಕಾರ್ಯ ಕೈಗೊಳ್ಳುವುದು ಸೂಕ್ತ. |
| ಶೇಂಗಾ<br>(ಬೀಜೋಪಚಾರ) | ➢ ಶೇಂಗಾ ಬಿತ್ತನೆ ಮಾಡುವ ರೈತರು ಬಿತ್ತನೆಗು ಮುನ್ನ ಜೀವಾಣು ಗೊಬ್ಬರವಾದ ರೈಜೋಬಿಯಂ ಅನ್ನು 1ಕೆ.ಜಿ. ಬೀಜಕ್ಕೆ 10ಗ್ರಾಂನಂತೆ ಮಿಶ್ರಿಸಿ ಬೀಜಕ್ಕೆ ಉಪಚರಿಸಿ 2ಗಂಟೆಗಳ ಕಾಲ ನೆರಳಿನಲ್ಲಿ ಒಣಗಿಸಿ ಬಿತ್ತನೆ ಕಾರ್ಯ ಕೈಗೊಳ್ಳುವುದು. |
| ಶೇಂಗಾ<br>(ಕಳೆ ನಿರ್ವಹಣೆ) | ➢ ಶೇಂಗಾ ಬಿತ್ತನೆ ಮಾಡಿದ ನಂತರ 3 ದಿವಸಗಳ ಒಳಗೆ ಉದಯಪೂರ್ವ ಕಳೆನಾಶಕವಾದ ಅಲಾಕ್ಲೋರ್ 50ಇ.ಸಿ. ಅನ್ನು 3ಮಿ.ಲೀ ನಂತೆ ಪ್ರತಿ ಲೀಟರ್ ನೀರಿಗೆ ಬೆರಸಿ ಭೂಮಿಗೆ ಸಿಂಪಡಿಸುವುದು. |

### ಜಾನುವಾರು ಸಲಹೆ:

| | |
|---|---|
| ಹಸು<br>(ಸಾಮಾನ್ಯ ಸಲಹೆ) | ➢ ಜಾನುವಾರುಗಳಿಗೆ ಕಾಲು ಬಾಯಿರೋಗ, ಚಪ್ಪೆರೋಗ ಕರುಳುಬೇನೆ ರೋಗಗಳ ವಿರುದ್ಧ ಲಸಿಕೆ ಹಾಕುವುದು ಸೂಕ್ತ.<br>➢ ಆಮ್ಲತೆಯನ್ನು ತಡೆಗಟ್ಟಲು ಸಮತೋಲಿತ ಆಹಾರವನ್ನು ನೀಡುವುದು.<br>➢ ಜಾನುವಾರುಗಳನ್ನು ಶೀತದಿಂದ ರಕ್ಷಿಸಲು ಕೊಟ್ಟಿಗೆಯಲ್ಲಿ ಕಟ್ಟುವುದು.<br>➢ ಕೊಟ್ಟಿಗೆಯಲ್ಲಿ ಸ್ವಚ್ಛತೆಯನ್ನು ಕಾಪಾಡುವುದು<br>➢ ಜಂತುನಾಶಕಗಳನ್ನು ಬಳಸಲು ಸೂಕ್ತ ಸಮಯವಾಗಿದೆ.<br>➢ ಕೆಚ್ಚಲು ಬಾವನ್ನು ತಡೆಗಟ್ಟಲು ಕೆಚ್ಚಲಿನಿಂದ ಹಾಲನ್ನು ಸಂಪೂರ್ಣವಾಗಿ ಹಿಂಡುವುದು. |

(ಈ ಮೇಲಿನ ಬೆಳೆ ಸಲಹೆಯು ಹವಾಮಾನ ಇಲಾಖೆ, ಬೆಂಗಳೂರು ಇವರು ನೀಡಿರುವ ಹವಾಮಾನ ಮುನ್ಸೂಚನೆಯ ಆಧಾರವಾಗಿದೆ)


**ಶ್ರೀ. ಪ್ರವೀಣ್ ಕೆ.ಎಮ್,**
ತಾಂತ್ರಿಕ ಅಧಿಕಾರಿಗಳು,
ಜಿ.ಕೆ.ಎಮ್.ಎಸ್–ವಿಭಾಗ,
ವ.ಕೃ.ತೋ.ಸಂ.ಕೇ–ಬ್ರಹ್ಮಾವರ.

**ಡಾ. ಕೆ. ವಿ. ಸುಧೀರ್ ಕಾಮತ್,**
ನೋಡಲ್ ಅಧಿಕಾರಿಗಳು,
ಜಿ.ಕೆ.ಎಮ್.ಎಸ್–ವಿಭಾಗ,
ವ.ಕೃ.ತೋ.ಸಂ.ಕೇ–ಬ್ರಹ್ಮಾವರ.